# ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)

ಹಾಗೂ

## ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಸಹಯೋಗದಲ್ಲಿ

# ಕಾರ್ಮಿಕ ದಿನಾಚರಣೆ

**ದಿನಾಂಕ: 15-05-2011, ಭಾನುವಾರ** **ಸ್ಥಳ: ನಾಯಂಡಹಳ್ಳಿ,**
**ಸಮಯ: ಬೆಳಿಗ್ಗೆ 10-30 ಕ್ಕೆ** **ಮೈಸೂರು ರಸ್ತೆ,**

ಕಾರ್ಮಿಕ ಸಂಗಾತಿಗಳೇ,

ಮೇ 1, ಕಾರ್ಮಿಕರ ದಿನವಾಗಿದ್ದು, ಕಾರ್ಮಿಕರ ಒಗ್ಗಟ್ಟಿನ ಆತ್ಮಬಲದ ಸಂಕೇತವಾಗಿದೆ. ಯಂತ್ರಗಳಂತೆ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ, ಬೆಂಗಳೂರಿನಲ್ಲಿ ಸುಮಾರು ಐದು ಲಕ್ಷದಷ್ಟು ಮಂದಿ ಇರುವ ನಾವು ಒಟ್ಟಿಗೇ ಸೇರಿ, ಈ ದಿನವನ್ನು ಸಂಭ್ರಮದಿಂದ ಆಚರಿಸೋಣ ಬನ್ನಿ. ನಮಗೂ ಸಹ ಮೇ ದಿನ ಆತ್ಮಬಲದ ಸಂಕೇತವಷ್ಟೇ ಅಲ್ಲ, ಭರವಸೆಯ ಸಂಕೇತವಾಗಿದೆ.

ಬೆಂಗಳೂರಿನಂತಹ ಮಹಾನಗರದಲ್ಲಿ ನಾವು ಕನಿಷ್ಟ ಮಟ್ಟದ ಜೀವನ ನಡೆಸಲೂ ಸಾಧ್ಯವಾಗದ ವೇತನ ಪಡೆಯುತ್ತಾ, ನಾಳೆಗೆ ಕೆಲಸ ಇರುತ್ತದೋ ಇಲ್ಲವೋ ಎಂಬ ಅಭದ್ರತೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಸೂಪರ್‌ವೈಸರ್, ಪ್ರೊಡಕ್ಷನ್‌ಮ್ಯಾನೇಜರ್‌ಗಳಿಂದ ಬೈಗುಳ, ಅವಮಾನ ಸಹಿಸಿಕೊಂಡು, 8 ಗಂಟೆಯಲ್ಲಿ ಮಾಡಲು ಸಾಧ್ಯವಾಗದಷ್ಟು ಪ್ರೊಡಕ್ಷನ್ ನೀಡುವ ಸಲುವಾಗಿ, ಸಂಜೆ ಏಳರವರೆಗೆ ಕಾರ್ಖಾನೆಯಲ್ಲಿ ಯಂತ್ರಗಳಂತೆ ದುಡಿಯುತ್ತಿದ್ದೇವೆ. ಆದರೆ ನಮ್ಮಿಂದ ದೇಶಕ್ಕೆ ದೊರಕುತ್ತಿರುವ ವಿದೇಶೀ ವಿನಿಮಯ ಅಪಾರ. ನಮ್ಮ ಈ ಸ್ಥಿತಿ ಬದಲಾಗಲೇ ಬೇಕು. ನಮಗೆ ನ್ಯಾಯಯುತವಾಗಿ ಸಿಗಬೇಕಾದ ಹಕ್ಕುಗಳು, ಸೌಲಭ್ಯಗಳನ್ನು ನೀಡಬೇಕು ಎಂದು ನಮ್ಮನ್ನಾಳುವ ಸರ್ಕಾರಗಳನ್ನು, ಮಾಲೀಕ ವರ್ಗವನ್ನು ಹಾಗೂ ಬ್ರಾಂಡ್‌ಗಳನ್ನು ನಿರಂತರವಾಗಿ ನಾವು ಕೇಳುತ್ತಲೇ ಇದ್ದೇವೆ.

ಆದರೆ ಗಾರ್ಮೆಂಟ್ಸ್ ಉದ್ಯಮದ ಮಾಲೀಕ ವರ್ಗವು ನಮ್ಮನ್ನು ತುಳಿಯಲು ವ್ಯವಸ್ಥಿತವಾಗಿ ಕೆಲಸ ಮಾಡಿಕೊಂಡು ಬರುತ್ತಿವೆ. ಪ್ರತಿವರ್ಷ ಸರ್ಕಾರ ಏರಿಸುವ ತುಟ್ಟಿಭತ್ಯೆಯನ್ನು, ಕನಿಷ್ಟವೇತನಕ್ಕಿಂತ ಹೆಚ್ಚಿರುವ ಕಾರ್ಮಿಕರಿಗೆ ನೀಡದೆ, ಅವರ ವೇತನ ಕನಿಷ್ಟವಾಗಿಯೇ ಇರುವಂತೆ ಮಾಲೀಕ ವರ್ಗ ನೋಡಿಕೊಳ್ಳುತ್ತದೆ. ಕೆಲವು ಕಾರ್ಖಾನೆಗಳಲ್ಲಿ ತುಟ್ಟಿಭತ್ಯೆಯನ್ನು ನೀಡುವುದೇ ಇಲ್ಲ. ನಮ್ಮ ನಿರಂತರ ಹೋರಾಟದ ಫಲವೆಂಬಂತೆ, ಸರ್ಕಾರ ಕಡೆಗೂ ನಮ್ಮೆಡೆಗೆ ಕಣ್ಣು ತೆರೆದು ನೋಡಿ, 2009 ರಲ್ಲಿ ಕನಿಷ್ಟ ವೇತನ ಹೆಚ್ಚಿಸಿತು. ಆದರೆ ಸರ್ಕಾರವೇ ತಾನು ತೆಗೆದುಕೊಂಡ "ನಿರ್ಧಾರದಲ್ಲಿ ತಪ್ಪಾಗಿದೆ" ಎಂದು ತಿದ್ದಿಕೊಳ್ಳುವಂತೆ ಮಾಡಿ ಹೆಚ್ಚಿಸಿದ ಕನಿಷ್ಟ ವೇತನವನ್ನು ಕಡಿಮೆ ಮಾಡುವ ಹಾಗೆ ಮಾಲೀಕವರ್ಗದ ಶಕ್ತಿ ಮಾಡಿತು. ಇದಲ್ಲದೆ ಕೆಲಸದ ಗಂಟೆಗಳನ್ನು ಹೆಚ್ಚಿಸುವ ಮೂಲಕ ಕಾರ್ಮಿಕ ಕಾನೂನುಗಳನ್ನಷ್ಟೇ ಅಲ್ಲದೆ, ಸರ್ಕಾರವನ್ನೂ ತಮ್ಮ ಹಿತಾಸಕ್ತಿಯ ಪರವಾಗಿ ಬದಲಿಸುವಷ್ಟು ಮಾಲೀಕವರ್ಗ ಪ್ರಾಬಲ್ಯ ಹೊಂದಿದೆ.

ಇದೆಲ್ಲದರ ಹಿನ್ನೆಲೆಯಲ್ಲಿ ನೋಡಿದಾಗ ನಮ್ಮ ಹಕ್ಕು ಪಡೆದುಕೊಳ್ಳಲು ನಾವು ಸಂಘಟಿತರಾಗದೇ ಬೇರೆ ದಾರಿಯಿಲ್ಲ. ಈ ನಿಟ್ಟಿನಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಕಳೆದ 8 ವರ್ಷಗಳಿಂದ ಕೆಲಸ ಮಾಡುತ್ತಲೇ ಬಂದಿದೆ. ಅಲ್ಲದೆ, ನಾವು ಸಂಘಟಿತ ಹೋರಾಟ ನಡೆಸಿದಾಗಲೆಲ್ಲ ನಮಗೆ ಜಯ ಸಿಕ್ಕಿದೆ.

ನಮ್ಮ ಹೋರಾಟಕ್ಕೆ ಮತ್ತಷ್ಟು ಬಲ ಬರಲು, ಎಲ್ಲ ಭೇದಭಾವಗಳನ್ನೂ ಮೀರಿ ಒಗ್ಗೂಡುವ ಸಂಕಲ್ಪವನ್ನು ನಾವು ಮಾಡಬೇಕಿದೆ. ನಾವು ಆಚರಿಸುವ ಮೇ ದಿನ ಅಂತಹ ಸಂಕಲ್ಪಕ್ಕೆ ಸ್ಫೂರ್ತಿಯಾಗಲಿ. ದಿನಾಂಕ 15.1.2011 ರಂದು ಬೆಳಿಗ್ಗೆ 10.30 ಕ್ಕೆ ಮೈಸೂರುರಸ್ತೆಯ ನಾಯಂಡಹಳ್ಳಿಯಲ್ಲಿ ಮೇ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಅಂದು ನಮ್ಮೊಡನೆ

**ಸುನಂದಾ ಜಯರಾಮ್**, ರೈತ ಮುಖಂಡರು, ಮಹಿಳಾ ಹೋರಾಟಗಾರರು

**ರಾಜೇಶ್ವರಿ ಬೆಳಗೋಡ್**, ಬೃ.ಬೆಂ.ಮ. ಪಾಲಿಕೆ ಸದಸ್ಯರು,

**ಬಿ.ಸುರೇಶ್**, ಸಂಚಾಲಕರು ಕ.ಅ.ಪ್ರಾಧಿಕಾರ, ಖ್ಯಾತ ಹಿರಿತೆರೆ/ಕಿರುತೆರೆ ನಿರ್ದೇಶಕ

ಮುಂತಾದ ಗಣ್ಯರು ಇರುತ್ತಾರೆ.

**ಇದೇ ಸಂದರ್ಭದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ನಡೆಸಿದ ಕನ್ನಡ ಕಲಿಕಾ ಶಿಬಿರದಲ್ಲಿ ಭಾಗವಹಿಸಿದ ಕಾರ್ಮಿಕರಿಗೆ ಪ್ರಮಾಣಪತ್ರವನ್ನೂ ವಿತರಿಸಲಾಗುತ್ತಿದೆ.**

**ಬನ್ನಿ. . . . . ಭಾಗವಹಿಸಿ. . . . . . . . . ಒಗ್ಗಟ್ಟಿನಲ್ಲಿ ಬಲವಿದೆ**

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿನ್ (GATWU) – 9742594757, 9844959210, 9845019056**

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ – 9739200749, 8722473930**